## ನಾಯಿ ಕಿತ್ತಳೆ ಸಂರಕ್ಷಣೆ

ಕಸಿ ತರಬೇತಿಯ ಇನ್ನೊಂದು ಯಶಸ್ಸು – ವಿನಾಶದ ಅಂಚಿಗೆ ತಲುಪಿದ್ದ ನಾಯಿ ಕಿತ್ತಳೆಯ ಸಂರಕ್ಷಣೆ. ದಕ್ಷಿಣ ಕನ್ನಡದ ಗುಡ್ಡಬೆಟ್ಟಗಳಲ್ಲಿ ಹಾಸುಹೊಕ್ಕಾಗಿದ್ದ ಹಣ್ಣು ಕಾಡು ಕಿತ್ತಳೆ. ಗ್ರಾಮ್ಯ ಭಾಷೆಯಲ್ಲಿ ಇದಕ್ಕೆ ನಾಯಿ ಕಿತ್ತಳೆ ಅಥವಾ ಇಳ್ಳಿ ಹಣ್ಣು ಎನ್ನುತ್ತಾರೆ. ಇವು ನೆಟ್ಟು ಬೆಳೆಸಿದ ಗಿಡಗಳಾಗಿರಲಿಲ್ಲ. ಪ್ರಾಣಿಗಳಿಂದ ಪ್ರಸರಣಗೊಂಡು ಬಿದ್ದ ಬೀಜ, ಮರವಾಗಿ ಬೆಳೆದು ಫಲ ನೀಡುತ್ತಿದ್ದವು. ಕಾಡು ಕೃಷಿ ಭೂಮಿಯಾಗಿ, ಅಡಿಕೆ, ರಬ್ಬರ್ ತೋಟಗಳು ನಾಡನ್ನು ವಿಸ್ತರಿಸಿದಂತೆ, ನಾಯಿ ಕಿತ್ತಳೆ ಕಣ್ಮರೆಯಾಗಿತ್ತು.

ನಾಯಿ ಕಿತ್ತಳೆಯ ಸಯಾನ್‌ಗಾಗಿ ಹುಡುಕಾಟ ನಡೆಸಿದ ಸುಳ್ಯದ ನಾಮಾಮಿ ತಂಡದವರಲ್ಲೊಬ್ಬರಾದ ಶ್ಯಾಮ್ ಗೊರಗೋಡಿ ಇದನ್ನು ಸೊಗಸಾಗಿ ವಿವರಿಸಿದ್ದು ಹೀಗೆ:

'ನಾಯಿ ಕಿತ್ತಳೆ ಕಣ್ಮರೆಯಾಗಿದೆಯೆಂದು ಯೋಚಿಸುವ ಹೊತ್ತಿಗಾಗಲೇ, ಅದರ ಸಂತತಿ ಅಲಭ್ಯವಾಗಿತ್ತು. ಅಂತೂ ಸುಳ್ಯದ ಕೃಷಿಕರೊಬ್ಬರು ತಮ್ಮ ಮನೆಯಲ್ಲಿ ನಾಯಿ ಕಿತ್ತಳೆ ಮರ ಇರುವುದನ್ನು ಖಚಿತಪಡಿಸಿದರು. ಶ್ರೀಪಡ್ರೆಯವರ ಸಹಾಯ ಪಡೆದೆವು. ಸಾಗರ, ಮೂಡಿಗೆರೆಯಲ್ಲಿ ಕೆಲವರ ಮನೆಯಲ್ಲಿ ನಾಯಿ ಕಿತ್ತಳೆ ಮರ ಇರುವ ಮಾಹಿತಿ ದೊರೆಯಿತು. ಸಯಾನ್ ತಂದು 300ಕ್ಕೂ ಹೆಚ್ಚು ಗಿಡಗಳನ್ನು ಮಾಡಿ ಜನರಿಗೆ ವಿತರಿಸಲಾಯಿತು. ಈಗ ಸುಳ್ಯ ಸುತ್ತಮುತ್ತಲಿನ ಕೃಷಿಕರ ತೋಟಗಳಲ್ಲಿ ನಾಯಿ ಕಿತ್ತಳೆಯ ಗತವೈಭವ ಮರಳಿದೆ. ಇದು ನಮ್ಮ ಕಸಿ ತರಬೇತಿಯ ಫಲಿತಾಂಶದ ಫಸಲು.'

'ಕಸಿ ವಿದ್ಯೆ ಕಲಿತವರಲ್ಲಿ 15 ವರ್ಷದವರಿಂದ 72 ವರ್ಷದವರೂ ಇದ್ದರು. ಅವರಲ್ಲಿ ಶೇ 60ರಷ್ಟು ಮಂದಿ ಕಸಿ ವಿದ್ಯೆ ಮುಂದುವರಿಸಿದ್ದಾರೆ. ಮೊನ್ನೆ ಸಿಕ್ಕ 60 ವರ್ಷದ ಮಹಿಳೆಯೊಬ್ಬರು ತಾವು ಕಸಿ ಕಲೆ ಮುಂದುವರಿಸಿರುವುದಾಗಿ ಹೆಮ್ಮೆಯಿಂದ ಹೇಳಿಕೊಂಡರು. ಮಾಜಿ ಸೈನಿಕ 72 ವರ್ಷದ ಜಗದೀಶ್ ಅವರು ಈಗಲೂ ಸಯಾನ್ ತಂದು ಕಸಿ ಕಟ್ಟುತ್ತ ಇತರರಿಗೆ ಪ್ರೇರಣೆಯಾಗಿದ್ದಾರೆ.'

ತರಬೇತಿಯಿಂದಾಗಿ ಕಸಿ ವಿದ್ಯೆಗೆ ಕಾಯಕಲ್ಪ ಸಿಕ್ಕಿದೆ. ತಳಿ ಸಂರಕ್ಷಣೆಯ ದೃಷ್ಟಿಯಿಂದ ಇದೊಂದು ದೃಢ ಹೆಜ್ಜೆ. ಹೊಸದಾಗಿ ಕಸಿ ಕಲಿತವರು ವಿದ್ಯೆ ಮುಂದುವರಿಸಿದ್ದಾರೆ. ಹೊಸ ಗಿಡ ತರುವ ಜೊತೆಗೆ, ತಳಿ ಉಳಿಸುವ ಕಾರ್ಯದಲ್ಲಿ ದೊಡ್ಡ ತಂಡವೇ ತೊಡಗಿಕೊಂಡಿದೆ. ಅದರ ಭಾಗವಾಗಿ ನಡೆದ ನಾಯಿ ಕಿತ್ತಳೆಯ ಪುನರುಜ್ಜೀವನ, ಲೋಕಾರ್ಪಣೆಯ ಹೆಸರಿನಲ್ಲಿ ನಡೆದ ಜನಜಾಗೃತಿ ಇದಕ್ಕೆ ಉತ್ತಮ ಉದಾಹರಣೆ ಎನ್ನುತ್ತಾರೆ ಶ್ರೀಪಡ್ರೆ.

ನಾಮಾವಶೇಷವಾಗಿದ್ದವು. ಅಲ್ಲಿಗೆ ಸುಮ್ಮನಾಗಿದ್ದ ಅವರ ಅದಮ್ಯ ಉತ್ಸಾಹಕ್ಕೆ ಭೀಮಬಲ ತುಂಬಿದ್ದು ನಾಮಾಮಿ.

'ಸಯಾನ್ ಸಂಗ್ರಹಕ್ಕೆ ಹೋಗಲು ನಿರ್ಧರಿಸಿ ಉಪಾಧ್ಯರು ಮತ್ತು ನಾವು ಮಾಣಿಯಲ್ಲಿ ಭೇಟಿಯಾದೆವು. ಅದೇ ನಮ್ಮ ಮೊದಲ ಭೇಟಿ. ಅದೇ ದಿನ 10ಕ್ಕೂ ಹೆಚ್ಚು ಮರಗಳ ಸಯಾನ್ ಅನ್ನು ಜೋಪಾನವಾಗಿ ತಂದು ಕಸಿ ಕಟ್ಟುವವರಿಗೆ ಕೊಟ್ಟೆವು. ಆ ವೇಳೆ ನಾವ್ಯಾಕೆ ಸುಳ್ಯದಲ್ಲೇ ಒಂದು ಕಸಿ ತರಬೇತಿ ಮಾಡಬಾರದು ಎಂಬ ಯೋಚನೆ ಬಂತು. ಸುಳ್ಯ ರೈತ ಉತ್ಪಾದಕ ಸಂಘದ ನೇತೃತ್ವದಲ್ಲಿ ತರಬೇತಿ ಹಮ್ಮಿಕೊಂಡೆವು. 110 ಜನರು ಹೆಸರು ನೋಂದಾಯಿಸಿಕೊಂಡರು' ಎನ್ನುತ್ತ ಕಸಿ ತರಬೇತಿಯ ಕಥೆ ಮುಂದುವರಿಸಿದರು.

ತರಬೇತಿಯಲ್ಲಿ ಶ್ಯಾಮ್ ಗೊರಗೋಡಿ, ಜಗದೀಶ್, ಶ್ರೀಶಕುಮಾರ್ ಹಾಗೂ ಇನ್ನೂ ಅನೇಕರು ಪ್ರಮುಖ ಪಾತ್ರ ವಹಿಸಿದರು. ಶಿಬಿರಾರ್ಥಿಗಳು ಸ್ವತಃ ಕಸಿ ಕಟ್ಟುವುದನ್ನು ಕಲಿತರು. ಇದನ್ನು ಕಂಡು ಮತ್ತಷ್ಟು ಜನರು ತರಬೇತಿ ಪಡೆಯಲು ಉತ್ಸುಕರಾದರು. ಎರಡನೇ ತರಬೇತಿಯಲ್ಲಿ 70 ಜನ ಭಾಗವಹಿಸಿದರು. ಮಂಗಳೂರು, ಉಡುಪಿ, ಮೈಸೂರಿನಿಂದಲೂ ಶಿಬಿರಾರ್ಥಿಗಳು ಬಂದಿದ್ದರು. ತರಬೇತಿ ನಡೆಸಿಕೊಡುವಂತೆ ಮಂಗಳೂರಿನಿಂದಲೂ ಆಹ್ವಾನ ಬಂತು. ಈವರೆಗೆ ಆರೆಂಟು ತರಬೇತಿಗಳಾಗಿರಬಹುದು. ನಾಮಾಮಿಯವರು



ಬೊಗಸೆ ತುಂಬಲು 13 ಹಣ್ಣು ಬೇಕು ಬೆಳ್ವೆ ಎಸ್ಸೆನ್

ಇವರು ಎಂದು ಗುರುತಿಸುವ ಮಟ್ಟಿಗೆ ಮಾವು ನಮಗೆ ಗೌರವವನ್ನು ತಂದುಕೊಟ್ಟಿದೆ ಎಂದ ಜಯರಾಮ ಅವರು 'ಮುಣ್ಣೆಕುಕ್ಕು' ಉಳಿವಿಗೆ ಕಸಿ ವಿದ್ಯೆ ಕಾರಣವಾದದ್ದನ್ನು ವಿವರಿಸಿದರು.

ಮುಣ್ಣೆಕುಕ್ಕು ಎಂಬ ಕಾಟು ಹಣ್ಣಿನ ತಿರುಳು ಜೊತೆಗೆ, ಜಜ್ಜಿದ ಗಾಂಧಾರಿ ಮೆಣಸಿನ ಖಾರ ಸೇರಿಸಿ ಅನ್ನ ಕಲಸಿದರೆ ಆಹಾ... ಉಂಡವನಿಗೇ ಗೊತ್ತು ಅದರ ಗಮ್ಮತ್ತು. 'ಈ ಅಪರೂಪದ ಮಾಮರ ಮುರಿದು ಬಿದ್ದಾಗ, ಸ್ಥಳೀಯರು ಮಾಹಿತಿ ನೀಡಿದರು. ತಕ್ಷಣ ಕಸಿ ಕಡ್ಡಿಯನ್ನು ತಂದು ಗಿಡ ಮಾಡಿ, ಹಲವರಿಗೆ ಹಂಚಿದ್ದೇವೆ. ನಾಡಮಾವಿನ ಪ್ರಜ್ಞೆ ಬೆಳೆದ ಕಾರಣಕ್ಕಾಗಿ ನಶಿಸಲಿದ್ದ ತಳಿಗೆ ಮರುಜನ್ಮ ಸಿಕ್ಕಿತು. ಈ ಮರದ ಗೊರಟಿನಿಂದ ಗಿಡ ಆಗಿದ್ದೇ ಇಲ್ಲವಂತೆ. ಕಸಿಯ



ಕೇರಳದ ತೇನ್ ವರಿಕ್ಕ (ಜೇನು ಬಕ್ಕೆ)



ಉತ್ತರ ಕನ್ನಡದ ವರಟೆ ಗಿಡುಗ



ಬಾಯಲ್ಲಿ ನೀರೂರಿಸುವ ಕೇರಳದ ಕಡುಕಾಚಿ



2.30 ಕೆ.ಜಿ. ಭಾರದ ಎಲಿಫೆಂಟ್ ಹೆಡ್